**ಓ.ಎಸ್. 38/2022** **ಪಿ.ಡಬ್ಲ್ಯೂ: 1**

**ದಿನಾಂಕಃ 27.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರಿದ ಪಾಟೀಸವಾಲುಃ ಪ್ರತಿವಾದಿಗಳಪರ ವಕೀಲರಾದ ಶ್ರೀ ಎನ್.ಎನ್. ಅವರಿಂದ–

1. 1 ನೇ ಪ್ರತಿವಾದಿ ನನ್ನ ಪತಿಯ ಸ್ನೇಹಿತನಾಗಿರುವುದರಿಂದ ನನಗೆ ಪರಿಚಯ. ಅವರು ನನ್ನ ಪತಿಗೆ 2012–13 ರಿಂದ ಸ್ನೇಹಿತರಾಗಿದ್ದಾರೆ. ನಮಗೆ ಕ್ರಯಕರಾರು ಪತ್ರ ಬರೆದುಕೊಟ್ಟಿದ್ದಾರೆ ಎನ್ನಲಾದ ಮನೆ ಸ್ವತ್ತಿನ ಮಾಲೀಕತ್ವ 1 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಆ ಬಗ್ಗೆ ನಾನು ದಾಖಲೆ ಪರಿಶೀಲನೆ ಮಾಡಿಲ್ಲ. ಸದರಿ ಮನೆ ಸ್ವತ್ತು 1 ನೇ ಪ್ರತಿವಾದಿಯ ಹೆಸರಿಗೆ ಹೇಗೆ ಬಂತು ನಾನು ತಿಳಿದುಕೊಂಡಿಲ್ಲ.

2. 1 ನೇ ಪ್ರತಿವಾದಿಗೆ ನಾನು ಒಂದೇ ಬಾರಿಗೆ ರೂ.30 ಲಕ್ಷಗಳನ್ನು ದಿಃ 07.02.2015 ರಂದು ನೀಡಿರುತ್ತೇನೆ. ಸದರಿ ಹಣವನ್ನು ಸಬ್ ರಿಜಿಸ್ಟ್ರಾರ್ ಅವರ ಕಚೇರಿಯಲ್ಲಿ ನಗದಾಗಿ ನೀಡಿದ್ದೆ. ನನ್ನಲ್ಲಿ ಆ ದಿನ ಅಷ್ಟು ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಇಲ್ಲಿ ಹಾಜರುಪಡಿಸಿಲ್ಲ. ನನ್ನ ಬ್ಯಾಂಕಿನ ಪಾಸ್ ಪುಸ್ತಕವನ್ನಾಗಲಿ ಹಾಗೂ ಸ್ಟೇಟ್ ಮೆಂಟ್ ಆಫ್ ಅಕೌಂಟ್ ಅನ್ನಾಗಲಿ ಇಲ್ಲಿ ಹಾಜರುಪಡಿಸಿಲ್ಲ.

**3.** ನನಗೆ ಮಿಲಿಟರಿ ಹೋಟೇಲ್ ಇದೆ. ಅದರಿಂದ ವರ್ಷಕ್ಕೆ ಸುಮಾರು **10** ಲಕ್ಷ ಆದಾಯ ಬರುತ್ತದೆ. ಈ ಸಂಬಂಧ ನಾನು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳಲ್ಲ. ನನಗೆ ಎ.ಪಿ.ಎಲ್ ರೇಷನ್ ಕಾರ್ಡ್ ಇದೆ.

**4.** ನಾನು ಹಣವನ್ನು 1 ನೇ ಪ್ರತಿವಾದಿ ಹಸ್ತ ಕೊಟ್ಟಿದ್ದೆ. ನಾನು ಮನೆಯನ್ನು ರೂ.42,80,000/– ಕ್ಕೆ ವ್ಯಾಪಾರ ಮಾಡಿದ್ದೆ. ರೂ. 10,80,000/–ಗಳನ್ನು ಕೂಡ

30 ಲಕ್ಷ ಹಣ ಕೊಟ್ಟ ದಿನವೇ ನೀಡಿರುತ್ತೇನೆ. ಈ ಹಣವನ್ನು ಕೂಡ ನಗದಾಗಿ 1 ನೇ ಪ್ರತಿವಾದಿ ಹಸ್ತ ಕೊಟ್ಟಿದ್ದೆ. ಅದೇ ದಿನದಂದು ರೂ. 10,80,000/- ಹಣವನ್ನು ಕೊಟ್ಟಿದ್ದೇನೆ ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಇಲ್ಲಿ ಹಾಜರುಪಡಿಸಿಲ್ಲ.

5. ನನಗೆ ಟಿ.ಎಸ್. ಶಿವಕುಮಾರ್ ಗೊತ್ತಿಲ್ಲ. ಅದೇ ರೀತಿ ಟಿ.ಎಸ್. ವೆಂಕಟೇಶ್, ಟಿ.ಆರ್. ಅಣ್ಣಯ್ಯ, ಟಿ.ಆರ್ ರಮೇಶ್ ಕುಮಾರ್, ಟಿ.ಎಸ್ ಕಿರಣ್ ಕುಮಾರ್, ಟಿ.ಹೆಚ್ ಶಿವಶಂಕರಪ್ಪ, ಟಿ.ವಾಸುದೇವ ಮೂರ್ತಿ ಕೂಡ ಗೊತ್ತಿಲ್ಲ. ನಾನು ತರೀಕೆರೆಯಲ್ಲಿ 24 ವರ್ಷಗಳಿಂದ ವಾಸವಾಗಿದ್ದೇನೆ. ಟಿ.ಹೆಚ್ ಶಿವಶಂಕರಪ್ಪ ತರೀಕೆರೆಯ ಮಾಜಿ MLA ಎಂದರೆ ಅದು ನನಗೆ ಗೊತ್ತು. ಆದರೆ ನಾನು ಗೃಹಿಣಿ ಆಗಿರುವುದರಿಂದ ಬೇರೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ. ಟಿ.ಹೆಚ್ ಶಿವಶಂಕರಪ್ಪ ಹಾಲಿ ಇಲ್ಲ, ಅವರು ಮರಣ ಹೊಂದಿ 6 ತಿಂಗಳಿಂದ 1 ವರ್ಷ ಆಗಿರಬಹುದು.

**6.** ನನ್ನ ಪತಿ ಹಾಗೂ ಮಾಜಿ MLA ಟಿ.ಹೆಚ್ ಶಿವಶಂಕರಪ್ಪ ಅವರು ಆತ್ಮೀಯರು ಎಂದರೆ ಇರಬಹುದು. ಅದೇ ರೀತಿ ಮೇಲಿ ಹೇಳಿದಂತ ಟಿ.ಎಸ್. ಶಿವಕುಮಾರ್, ಟಿ.ಎಸ್. ವೆಂಕಟೇಶ್, ಟಿ.ಆರ್. ಅಣ್ಣಯ್ಯ, ಟಿ.ಆರ್ ರಮೇಶ್ ಕುಮಾರ್, ಟಿ.ಎಸ್ ಕಿರಣ್ ಕುಮಾರ್, ಟಿ.ವಾಸುದೇವ ಮೂರ್ತಿ ಅವರು ಸಹ ನನ್ನ ಪತಿಯ ಆತ್ಮೀಯರು ಎಂದರೆ ಹೊರಗಡೆ ಇರಬಹುದು. ಮನೆಯಲ್ಲಿ ಇಲ್ಲ.

7. ಮೇಲೆ ಹೇಳಿದಂತ ರೂ.30 ಲಕ್ಷ ಹಾಗೂ ರೂ.10,80,000/- ಹಣವನ್ನು 1 ನೇ ಪ್ರತಿವಾದಿಗೆ ನೀಡಿರುತ್ತೇನೆ ಎಂದು ಹೇಳಿದ್ದು ಅದನ್ನು ಹೊರತುಪಡಿಸಿ 1 ನೇ ಪ್ರತಿವಾದಿಗೆ ನನಾಗಲಿ ನನ್ನ ಪತಿಯಾಗಲಿ ನೀಡಿರುವುದಿಲ್ಲ. ಅದೇ ರೀತಿ 1 ನೇ ಪ್ರತಿವಾದಿಯ ಹೆಂಡತಿಯಾದ 2 ನೇ ಪ್ರತಿವಾದಿಗೆ ನಾವು ಯಾವುದೇ ಹಣವನ್ನು ನೀಡಿರುವುದಿಲ್ಲ.

8. ದಿಃ 09.06.2020 ರಂದು ತರೀಕೆರೆಯಿಂದ ನನ್ನ ಪತಿ ಹಾಗೂ ಮೇಲೆ ಹೇಳಿದ ಅವರ ಸ್ನೇಹಿತರು ಸೇರಿಕೊಂಡು ಹುಣಸೂರಿಗೆ ಕಾರಿನಲ್ಲಿ 1 ನೇ ಪ್ರತಿವಾದಿ ಮನೆಯ ಬಳಿ ಬಂದು ಅವರ ವಿರುದ್ಧ ಗಲಾಟೆ ಮಾಡಿದ್ದರಿಂದ, 1 ನೇ ಪ್ರತಿವಾದಿ ಹುಣಸೂರು ಪಟ್ಟಣ

ಠಾಣೆ ಗೆ ದೂರು ದಾಖಲು ಮಾಡಿದ್ದಾರೆ ಎಂದರೆ ಸುಳ್ಳು. ಆ ವಿಚಾರ ನನ್ನವರೆಗೆ ಬಂದಿಲ್ಲ. ನನ್ನ ಪತಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ಹೇಳುತ್ತಿರುವ ವಿಚಾರ ಸುಳ್ಳು.

**9.** ನಿಪಿ.**1** ರ ಅಗ್ರಿಮೆಂಟ್ ನಲ್ಲಿ ರೂ.**30** ಲಕ್ಷ ಕೊಟ್ಟಿರುವ ಬಗ್ಗೆ ನಮೂದಾಗಿದೆ, **2** ನೇ ಅಗ್ರಿಮೆಂಟ್ ನಲ್ಲಿ ರೂ.10,80,000/- ಹಣವನ್ನು ಕೊಟ್ಟಿರುವ ಬಗ್ಗೆ ನಮೂದಾಗಿದೆ. ಈ ಹಂತದಲ್ಲಿ ಸಾಕ್ಷಿಗೆ ನಿಪಿ.**3** ಹಾಗೂ **5** ರ ಪೂರಕ ಪತ್ರಗಳನ್ನು ಕೈಗೆ ಕೊಟ್ಟು ಇವುಗಳಲ್ಲಿ ನಾನು 1 ನೇ ಪ್ರತಿವಾದಿಗೆ ಕರಾರು ಆದ ದಿನದಂದೇ ರೂ.10,80,000/- ಹಣವನ್ನು ಕೊಟ್ಟಿದ್ದೇನೆ ಎಂಬ ಬಗ್ಗೆ ಯಾವುದೇ ನಮೂದಾಗಿಲ್ಲ ಎಂದರೆ ಸರಿ ಎಂದು ನುಡಿಯುತ್ತಾರೆ.

**10.** 1 ನೇ ಪ್ರತಿವಾದಿಯು ತಮಗೆ ಕಷ್ಟವಿದೆ ನಾವು ಮನೆ ಮಾರುತ್ತೇವೆ ಎಂದು ನಮ್ಮ ಬಳಿ ಬಂದಿದ್ದರು. ನಿಪಿ.1 ರ 3 ನೇ ಪ್ಯಾರಾದಲ್ಲಿ ಕೆಳಕಂಡ ಸಾಕ್ಷಿಗಳ ಮೊತ್ತ ಕ್ರಯದ ಮೊಬಲಗಿನ ಪೈಕಿ ಮುಂಗಡವಾಗಿ ರೂ.30 ಲಕ್ಷ ಪಡೆದುಕೊಂಡಿರುತ್ತೇನೆ. ಉಳಿಕೆ 12 ಲಕ್ಷಗಳ ಪೈಕಿ ಸುಂದರಮ್ಮ ಫೈನಾನ್ಸ್ ನಲ್ಲಿ ನೀವೆ ತೀರಿಸಿಕೊಂಡು ಉಳಿಕೆ ಮೊಬಲಗಾದ ರೂ.1,20,000/- ಗಳನ್ನು ಈ ಲಾಗಾಯ್ತು 3 ವರ್ಷ ವಾಯಿದೆಯೊಳಗಾಗಿ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳೊಡನೆ ಬಂದು ನೀವು ಅಪೇಕ್ಷಿಸಿದ ವೇಳೆಯಲ್ಲಿ. . . . . . . . . . .. ಎಂದು ನಮೂದಿಸಿದೆ ಎಂದರೆ ಫೈನಾನ್ಸ್ ಜವಾಬ್ದಾರಿಯನ್ನು ನಾವು ಒಪ್ಪಿಕೊಂಡಿರಲಿಲ್ಲ ಎಂದು ನುಡಿದು ನಂತರ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ಈ ರೀತಿ ನಿಪಿ.1 ರಲ್ಲಿರುವ ಬರವಣಿಗೆ ಸುಳ್ಳಾ ಎಂದರೆ ಸುಳ್ಳು ಎಂದೇ ಹೇಳುತ್ತೇನೆ.

11. ನಾನು ಈ ದಾವದಲ್ಲಿ ಹೇಳುತ್ತಿರುವ ಅಗ್ರಿಮೆಂಟ್ ನಲ್ಲಿ ಎಂದು ವಕೀಲರು ಪ್ರಶ್ನೆ ಇನ್ನೂ ಪೂರ್ಣಗೊಳಿಸುವ ಮೊದಲೇ ಅದು ಅಗ್ರಿಮೆಂಟ್ ಅಲ್ಲ ನಾವು ಖರೀದಿ ಮಾಡಿದ್ದೇವು ಆದ್ದರಿಂದ ಅದು ಕ್ರಯಪತ್ರ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.1 ರಲ್ಲಿ

ಕ್ರಯಪತ್ರ ಎಂದು ನಮೂದಾಗಿಲ್ಲ ಎಂದರೆ ಸರಿ ಎಂದು ನುಡಿದು ಪುನಃ ನಾನು ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ.

12. ವ್ಯಾಪಾರದ ಸಂಬಂಧ ನೊಂದಣಿ ಫೀಯನ್ನು 1 ನೇ ಪ್ರತಿವಾದಿಯೇ ಕಟ್ಟಿರುತ್ತಾರೆ. ಸಾಕ್ಷಿ ಮುಂದುವರಿದು ನೊಂದಣಿ ಫೀಯನ್ನು ನಾವೇ ಕಟ್ಟಿದ್ದೇವು ಎಷ್ಟು ಕಟ್ಟಿದ್ದೇವು ನನಗೆ ಗೊತ್ತಿಲ್ಲ. ಅದನ್ನು ನನ್ನ ಪತಿ ಕಟ್ಟಿದ್ದರು. ಈ ವ್ಯಾಪಾರವು ತರೀಕೆರೆಯಲ್ಲಿಯೇ ಆಗಿತ್ತು. ವ್ಯಾಪಾರದ ಸಮಯದಲ್ಲಿ ಗಂಡ ಹೆಂತಿಯರಾದ ಪ್ರತಿವಾದಿಗಳು ಹಾಗೂ ನಾನು ನನ್ನ ಪತಿ ಇದ್ದೇವು. ನಮ್ಮ 4 ಜನರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನಿಪಿ.1 ಕ್ಕೆ ಸಾಕ್ಷಿದಾರರಾಗಿ ಮಹದೇವು ಹಾಗೂ ರವಿರಾಜು ಸಹಿ ಮಾಡಿದ್ದಾರೆ. ಮಹದೇವು ಹಾಗೂ ರವಿರಾಜು ಅವರ ತಂದೆ ಹೆಸರು ನನಗೆ ಗೊತ್ತಿಲ್ಲ. ನಿಪಿ.3 ಹಾಗೂ 4 ಕ್ಕೆ ಸಾಕ್ಷಿದಾರರಾಗಿ ಜಯಣ್ಣ ಹಾಗೂ ರವಿರಾಜು ಸಹಿ ಮಾಡಿದ್ದಾರೆ. ಇವರುಗಳ ತಂದೆ ಹೆಸರು ಕೂಡ ನನಗೆ ಹೇಳಲು ಆಗುವುದಿಲ್ಲ.

13. ಪ್ರತಿವಾದಿಗಳಿಗೆ ಸಂಪೂರ್ಣ ಹಣವನ್ನು ಪಾವತಿ ಮಾಡಿ ಅವರು ಕ್ರಯಪತ್ರ ಬರೆದುಕೊಟ್ಟಿದ್ದ ಆದಲ್ಲಿ ನಾವು ಕ್ರಯಪತ್ರದ ಪ್ರಕಾರ ಏಕೆ ಸ್ವತ್ತಿನ ಸ್ವಾಧೀನಪಡೆದುಕೊಂಡಿಲ್ಲ ಎಂದರೆ ನನ್ನ ಪತಿ ಹಾಗೂ ಅವರು ವಿಶ್ವಾಸದಿಂದ ಇದ್ದರು. ಅವರು ನಮಗೆ ಕಷ್ಟ ಇದೆ ಸ್ವಲ್ಪ ಸಮಯ ಬೇಕು ಎಂದು ಕೇಳಿದ್ದರು, ಅವರು ಅದೇ ಮನೆಯಲ್ಲಿ ವಾಸವಿದ್ದರು ಆದ್ದರಿಂದ ಸ್ವಾಧೀನಪಡೆದುಕೊಂಡಿಲ್ಲ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

14. 1 ನೇ ಪ್ರತಿವಾದಿಯು ನನ್ನ, ನನ್ನ ಪತಿಯ ಹಾಗೂ ಅವರ ಸ್ನೇಹಿತರ ವಿರುದ್ಧ ಹುಣಸೂರು ಪಟ್ಟಣ ಠಾಣೆಯಲ್ಲಿ Cr 219/22 ರಂತೆ ಕೇಸು ದಾಖಲಿಸಿದ್ದಾರೆ ಎಂದರೆ ಸುಳ್ಳು. ನಾವುಗಳು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದಿರುತ್ತೇವೆ ಎಂದರೆ ಸರಿ. ಪ್ರತಿವಾದಿಗಳು ನಮ್ಮ ವಿರುದ್ಧ ಯಾವ ಕಾರಣಕ್ಕೆ ನಮ್ಮ ವಿರುದ್ಧ ಕೇಸು ದಾಖಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

15. ದಿಃ 22.02.2021 ರಂದು ನಾನು ಪ್ರತಿವಾದಿಯರಿಗೆ ನಿಪಿ.7 ರಂತೆ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟೀಸ್ ನಲ್ಲಿ ನಾನು ಪ್ರತಿವಾದಿಗಳಿಗೆ ನೀವು ಬಂದು ಕ್ರಯಪತ್ರ ನೊಂದಣಿ ಮಾಡಿಸಿಕೊಡಿ ಎಂದು ಕೇಳಿದ್ದೇನೆ ಎಂದರೆ ಸರಿ. ಸದರಿ ನೋಟೀಸ್ ಗೆ ಪ್ರತಿವಾದಿಗಳು ಜವಾಬು ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆ ಅದೇ ಜವಾಬು ನೋಟೀಸ್ ನ ಕಚೇರಿ ಪ್ರತಿಯಾಗಿದೆ ಎಂದರೆ ಸರಿ. ಆದರೆ ಅದನ್ನು ನಾನು ಓದಿ ನೋಡಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮನೆಗೆ ಜವಾಬು ನೋಟೀಸ್ ತಲುಪಿದೆ ಎಂದರೆ ಇರಬಹುದು. ಈ ಹಂತದಲ್ಲಿ ಸಾಕ್ಷಿದಾರರಿಗೆ ತೋರಿಸಿದ **ಜವಾಬು ನೋಟೀಸ್ ನ ಕಚೇರಿ ಪ್ರತಿಯನ್ನು ನಿಡಿ.1** ಎಂದು ಗುರುತಿಸಲಾಯಿತು.

16. ಪ್ರತಿವಾದಿಗಳಿಗೆ ದಾವ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ವಾಸದ ಮನೆ ಇರುವುದಿಲ್ಲ ಎಂದರೆ ಸರಿ. ಅಗ್ರಿಮೆಂಟ್ ಅವಧಿ 3 ವರ್ಷಗಳಾಗಿದ್ದು ಅವಧಿ ಮುಗಿದ ನಂತರ ನಾವು ಪ್ರತಿವಾದಿಗಳಿಗೆ ಯಾವುದೇ ನೋಟೀಸ್ ನೀಡಿರಲಿಲ್ಲ. ಆದರೆ ವಿಶ್ವಾಸದಲ್ಲಿದ್ದ ಕಾರಣ ಮೌಖಿಕವಾಗಿ ಕೇಳಿದ್ದೇವು. ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ನಿಪಿ.7 ರ ನೋಟೀಸ್ ತಯಾರು ಮಾಡಲು ವಕೀಲರಿಗೆ ಮಾಹಿತಿಯನ್ನು ನನ್ನ ಪತಿ ನೀಡಿರುತ್ತಾರೆ. ನಿಪಿ.7 ರಲ್ಲಿ ಏನೂ ಮಾಹಿತಿ ಇದೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.